ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 2119/2018
ಚಾಸಾಃ3 ಪ್ರಾಸಾಃ3

ದಿನಾಂಕಃ 20.11.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಅರುಣ |
| ಗಂಡನ ಹೆಸರು | : | ಚಂದ್ರಶೇಖರ ಶೆಟ್ಟಿ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಎನು ಇಲ್ಲ |
| ವಾಸ ಸ್ಥಳ | : | ಉಳ್ತೂರು, ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಮೃತ ಕಿರಣ್ ಶೆಟ್ಟಿ , ಚಾಸ.1, ಚಾಸಾ.2 ಮತ್ತು ಚಾಸಾ.4 ನನ್ನ ಸ್ನೇಹಿತರು. ದಿನಾಂಕ 15.07.2018 ರಂದು ನಾನು, ಚಾಸಾ1, ಚಾಸಾ.2, ಮೃತ ಕಿರಣ್ ಶೆಟ್ಟಿ ಮತ್ತು ದೀಕ್ಷಿತ್ ಶೆಟ್ಟಿ ರವರು ತೊಂಬಟ್ಟು ಪಾಲ್ಸ ನೋಡಿಕೊಂಡು ಕೆ.ಎ-20/ಎನ್-2213 ಕಾರಿನಲ್ಲಿ ವಾಪಾಸ್ಸು ಬರುತ್ತಿದ್ದು, ಕಾರನ್ನು ಮೃತ ಕಿರಣ್ ಶೆಟ್ಟಿ ಚಾಲನೆ ಮಾಡುತ್ತಿದ್ದು, ನಾನು ಹಿಂಬದಿಯ ಎಡಭಾಗದ ಸೀಟಿನಲ್ಲಿ ಕುಳಿತ್ತಿದ್ದು, ದೀಕ್ಷಿತ್ ಶೆಟ್ಟಿ ಚಾಲಕನ ಸೀಟಿನ ಹಿಂಭಾಗದಲ್ಲಿ ಕುಳಿತ್ತಿದ್ದರು. ಸುಮಾರು 5.20 ಗಂಟೆಗೆ ಕಾವ್ರಾಡಿ ಗ್ರಾಮದ ನೆಲ್ಲಿಕಟ್ಟೆಯ ಟೈಲ್ಸ ಫ್ಯಾಕ್ಟರಿಯ ಬಳಿ ತಿರುವಿನ ರಸ್ತೆಯಲ್ಲಿ ಬರುತ್ತಿದ್ದಾಗ, ಕುಂದಾಪುರದಿಂದ ಸಿದ್ಧಾಪುರಕ್ಕೆ  ಬಸ್ಸು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಲಕ್ಕೆ ಬಂದು ನಮ್ಮ ಕಾರಿಗೆ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ.

ಅಪಘಾತದಲ್ಲಿ ಕಾರು ಮುದ್ದೆಯಾಗಿತ್ತು, ನನಗೆ ಕೆನ್ನೆಗೆ, ಕಾಲು ಮತ್ತು ಬಲಸೊಂಟ, ದವಡೆಗೆ ಪೆಟ್ಟಾಗಿ ಎರಡು ಹಲ್ಲು ಉದುರಿ ಹೋಗಿತ್ತು. ನನ್ನ ಸೊಂಟದ ಮೂಳೆ ಮುರಿದಿತ್ತು. ನನಗೆ ಕೆನ್ನೆಯ ಮೇಲೆ ಓಪನ್ ಆಗಿ ಸರ್ಜರಿ ಆಗಿರುತ್ತದೆ. ನನ್ನ

ತುಟಿಯ ಬಳಿ ಗಾಯವಾಗಿದ್ದು, ಕೈಗೆ ತರಚಿದ ಗಾಯವಾಗಿರುತ್ತದೆ. ಜೀವನ್ ಶೆಟ್ಟಿ ಮತ್ತು ಮನೀಶ್ ಶೆಟ್ಟಿಯವರಿಗೆ ಪೆಟ್ಟಾಗಿದ್ದು, ಅವರನ್ನು ಚಿನ್ಮಯಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಮತ್ತೊಂದು ಕಾರಿನಲ್ಲಿ ನಮ್ಮ ಮುಂದೆ ಹೋಗುತ್ತಿದ್ದ ನಮ್ಮ ಸ್ನೇಹಿತರು ಆಸ್ಪತ್ರೆಗೆ ಸೇರಿಸಿರುತ್ತಾರೆ. ಕಿರಣ್ ಶೆಟ್ಟಿಯವರಿಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಅವರನ್ನು ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಮಣಿಪಾಲ ಆಸ್ಪತೆಗೆ ಸೇರಿಸಿರುತ್ತಾರೆ. ನನಗೂ ಗಂಭೀರ ಗಾಯವಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗೆ ಚಿನ್ಮಯಿ ಆಸ್ಪತ್ರೆಯಿಂದ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ದೀಕ್ಷಿತ್ ಶೆಟ್ಟಿಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ.

ನನ್ನನ್ನು ಮಣಿಪಾಲ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ವಿಭಾಗದಲ್ಲಿ ದಾಖಲಿಸಿದ್ದು, ನಂತರ ವಾರ್ಡಿಗೆ ಸ್ಥಳಾಂತರಿಸಿರುತ್ತಾರೆ. ಅಪಘಾತಪಡಿಸಿದ ಬಸ್ಸಿನ ಸಂಖ್ಯೆ:ಕೆಎ-20/ಎ-3040 ಮತ್ತು ಬಸ್ಸಿನ ಚಾಲಕನ ಹೆಸರು ಭರತೇಶ್ ಪಟಗಾರ್ ಎಂದು ತಿಳಿದಿರುತ್ತದೆ. ದಿನಾಂಕ 19.07.2018 ರಂದು ನಾನು ಪೊಲೀಸರಿಗೆ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಅಪಘಾತಕ್ಕೆ ಬಸ್ಸಿನ ಚಾಲಕನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣವಾಗಿರುತ್ತದೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.2 ರಿಂದ 5 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ವಕೀಲರಾದ ಶ್ರೀ ಎಮ್ ಎಮ್ ಹೆಚ್ ರವರಿಂದ,</u>**

ಅಪಘಾತವಾಗಿರುವುದು ಮಳೆಗಾಲದಲ್ಲಿ ಎಂದರೆ ಸರಿ. ಅಪಘಾತವಾಗುವ ಸಮಯದಲ್ಲಿ ಸಾದಾರಣ ಮಳೆ ಬರುತ್ತಿತ್ತು. ಅಪಘಾತವಾದ ಸ್ಥಳದ ಉತ್ತರಕ್ಕೆ ಗಿರಿಜಾ ಟೈಲ್ಸ ಬಳಿ ಬಸ್ಸು ನಿಲ್ದಾಣ ಇದೆ ಎಂದರೆ ನನಗೆ ಗೊತ್ತಿಲ್ಲ. ಕುಂದಾಪುರದಿಂದ

ಸಿದ್ಧಾಪುರದ ಕಡೆಗೆ ಹೋಗುವಾಗ ಅತೀಯಾದ ತಿರುವು ಇದೆ ಎಂದರೆ ಸರಿ. ಸಾದಾರಣ ಮಳೆ ಬರುವ ಸಮಯದಲ್ಲಿ ತಿರುವು ಇದ್ದ ಕಾರಣ ಮುಂದೆ ಬರುವ ವಾಹನ ಕಾಣುವುದಿಲ್ಲ ಎಂದರೆ ಸರಿ. ಅಪಘಾತವಾಗುವ ಸಮಯದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಒಂದು ಬಸ್ಸು ನಿಂತಿತ್ತು ಎಂದರೆ ನಾನು ನೋಡಿಲ್ಲ. ಅಪಘಾತ ಸ್ಥಳದ ಹತ್ತಿರದಲ್ಲಿ ಗಿರಿಜಾ ಟೈಲ್ಸ ಫ್ಯಾಕ್ಟರಿ ಇರುವುದನ್ನು ನೋಡಿರುತ್ತೇವೆ. ಅಪಘಾತದ ನಂತರ ಬಸ್ಸು ಮತ್ತು ಕಾರಿನ ಗಾಜಿನ ಚೂರುಗಳು ಎಡಭಾಗದಲ್ಲಿ ಮತ್ತು ಮಧ್ಯಭಾಗದಲ್ಲಿ ಬಿದ್ದಿರುವುದನ್ನು ನಾನು ಪೋಟೋದಲ್ಲಿ ನೋಡಿರುತ್ತೇನೆ, ಸ್ಥಳದಲ್ಲಿ ನೋಡಿರುವುದಿಲ್ಲ.

ಪೊಲೀಸರ ಬಳಿ ಅಪಘಾತದ ನಂತರ ಬಸ್ಸು ಮತ್ತು ಕಾರಿನ ಗಾಜಿನ ಚೂರುಗಳು ಎಡಭಾಗದಲ್ಲಿ ಮತ್ತು ಮಧ್ಯಭಾಗದಲ್ಲಿ ಬಿದ್ದಿರುವ ಬಗ್ಗೆ ಅವರು ಕೇಳಿಲ್ಲದ ಕಾರಣ ನಾನು ಹೇಳಿರುವುದಿಲ್ಲ. ಚಾಸಾ.2 ರವರ ವಿಚಾರಣೆ ಆಗಿದೆ ಎಂದರೆ ಸರಿ. ನನಗೆ ಸಮನ್ಸ ಬಂದ ಕೂಡಲೇ ಚಾಸಾ.2 ರವರನ್ನು ವಿಚಾರಣೆ ಆಗಿರುವ ಬಗ್ಗೆ ಕೇಳಿರುವುದಿಲ್ಲ. ಅಪಘಾತವಾದ ರಭಸಕ್ಕೆ ನಮ್ಮ ಕಾರು ಮಧ್ಯೆ ರಸ್ತೆಯಲ್ಲಿ ತಿರುಗಿ ನಿಂತಿತ್ತು ಎಂದರೆ ಸರಿ. ಸಾರ್ವಜನಿಕರು ನಮ್ಮನ್ನು ಕಾರಿನಿಂದ ತೆಗೆದಿರುವುದು ಗೊತ್ತು, ಆದರೆ ಅಪಘಾತದ ನಂತರ ಕಾರನ್ನು ಮಣ್ಣು ರಸ್ತೆಗೆ ತೆಗೆದುಕೊಂಡು ಬಂದ ಬಗ್ಗೆ ಗೊತ್ತಿಲ್ಲ. ಅಪಘಾತವಾದ ನಂತರ ನಮ್ಮ ಕಾರು ರಸ್ತೆಯ ಮಧ್ಯದಲ್ಲಿ ನಿಂತಿದ್ದರಿಂದ ಸ್ವಲ್ಪ ಹೊತ್ತು ರಸ್ತೆ ಬ್ಲಾಕ್ ಆಗಿತ್ತು ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಬಸ್ಸು ನಿಂತಿಲ್ಲ. ಗಾಜಿನ ಚೂರುಗಳು ಬಸ್ಸಿನ ಮುಂಭಾಗದಲ್ಲಿ ಬಿದ್ದಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

ಆ ದಿನ ನಾವು ಮೋಜು-ಮಸ್ತಿ ಮಾಡಲು ತೊಂಬಟ್ಟಿಗೆ ಹೋಗಿ ವಾಪಾಸ್ಸು ಬರುವಾಗ ಅಪಘಾತವಾಗಿದೆ ಎಂದರೆ ಸಾಕ್ಷಿಯು ನಾವು ಮೋಜು-ಮಸ್ತಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ಆ ದಿನ ಮಳೆ ಬರುತ್ತಿದ್ದ ಕಾರಣ ನಮ್ಮ ಕಾರಿನ ಚಾಲಕನು ತಿರುವಿನಲ್ಲಿ ಎದುರು ಇರುವ ವಾಹನವನ್ನು ಕಾಣದೇ ಬಸ್ಸು ನಿಲ್ದಾಣದಲ್ಲಿ ನಿಂತಿದ್ದ ಬಸ್ಸಿಗೆ ಹೋಗಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾಗುವಾಗ ಬಸ್ಸು ಚಾಲನಾ ಸ್ಥಿತಿಯಲ್ಲಿರಲಿಲ್ಲ, ಬಸ್ಸು ನಿಲ್ದಾಣದಲ್ಲಿ ನಿಂತುಕೊಂಡಿತ್ತು ಎಂದರೆ ಸರಿಯಲ್ಲ. ಬಸ್ಸಿನ ಚಾಲಕನ ಹೆಸರನ್ನು ಪೊಲೀಸರು ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ

ಹೇಳಿದ ರೀತಿ ಅಪಘಾತವಾಗಿಲ್ಲ, ಕಿರಣ್ ಶೆಟ್ಟಿರವರ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**